# ಬಾಲಕಾರ್ಮಿಕ ಪದ್ಧತಿ ಕೊನೆಗಾಣಿಸುವಲ್ಲಿ ಮಕ್ಕಳ ನ್ಯಾಯ ಕಾಯಿದೆಯ ಪಾತ್ರ

## – ಸಾಧ್ಯತೆಗಳು ಮತ್ತು ಸಮಸ್ಯೆಗಳು –

ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಜಂಟಿ ಕಾರ್ಯಕ್ರಮ
30 ಜುಲೈ 2008, ಬೆಂಗಳೂರು


*** ವಾಸುದೇವ ಶರ್ಮಾ,**

ಅಧ್ಯಕ್ಷ, ಮಕ್ಕಳ ಕಲ್ಯಾಣ ಸಮಿತಿ, ಬೆಂಗಳೂರು. ದೂ. 9448472513


## *ಮಕ್ಕಳ ನ್ಯಾಯ ಕಾಯಿದೆ 2000*

### 1. ಮಕ್ಕಳ ಕಲ್ಯಾಣ ಸಮಿತಿಗಳು

- ಸೆಕ್ಷನ್ 2 : 18 ವರ್ಷದೊಳಗಿನವರೆಲ್ಲರೂ ಮಕ್ಕಳು.
- ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯಿದೆ 2000/ತಿದ್ದುಪಡಿ 2006ರ ಅಡಿಯಲ್ಲಿ ಮಕ್ಕಳ ಕಲ್ಯಾಣ ಸಮಿತಿಗಳನ್ನು ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಸ್ಥಾಪಿಸಲಾಗಿದೆ.
- ಕಾಯಿದೆಯ ಸೆಕ್ಷನ್ 29 (5)ರಂತೆ ಮಕ್ಕಳ ಕಲ್ಯಾಣ ಸಮಿತಿಗಳು ನ್ಯಾಯಾಧೀಶರ ಪೀಠದಂತೆ ಕಾರ್ಯನಿರ್ವಹಿಸುವ ಅಧಿಕಾರ ಹೊಂದಿವೆ.
- ಸೆಕ್ಷನ್ 31 (1)ರಂತೆ ಮಕ್ಕಳ ಆರೈಕೆ, ಪೋಷಣೆ, ರಕ್ಷಣೆ, ಚಿಕಿತ್ಸೆ, ಅಭಿವೃದ್ಧಿ ಮತ್ತು ಪುನರ್ವಸತಿ ಅಲ್ಲದೆ, ಮಕ್ಕಳ ಮೂಲ ಆವಶ್ಯಕತೆಗಳನ್ನು ಪೂರೈಸಲು ಹಾಗೂ ಮಕ್ಕಳ ಮಾನವ ಹಕ್ಕುಗಳನ್ನು ರಕ್ಷಿಸುವ ದಿಶೆಯಲ್ಲಿ ಮಕ್ಕಳ ಕಲ್ಯಾಣ ಸಮಿತಿಗಳಿಗೆ ಪೂರ್ಣಾಧಿಕಾರವಿದೆ.

### 2. ಸಂವಿಧಾನದ ಪರಿಚ್ಛೇದ 21 'ಎ' ಶಿಕ್ಷಣ ಮೂಲಭೂತ ಹಕ್ಕು.

- **ಮೂಲಭೂತ ಹಕ್ಕಿನ ಉಲ್ಲಂಘನೆ (Commission) ಶಿಕ್ಷಾರ್ಹ ಅಪರಾಧ**
- **ಮಕ್ಕಳು ದುಡಿಯುತ್ತಿರುವುದು, ಶಾಲೆಯಿಂದ ಹೊರಗಿರುವ ಪರಿಸ್ಥಿತಿ ಇದ್ದು, ಶಿಕ್ಷಣದ ಹಕ್ಕಿನ ಉಲ್ಲಂಘನೆ ಆಗುತ್ತಿರುವಾಗ ಏನೂ ಮಾಡದೆ ಸುಮ್ಮನಿರುವುದು ಸಹ ಅಪರಾಧ (Omission)**
- **ಇದರ ವ್ಯಾಪ್ತಿಯಲ್ಲಿ ಪೋಷಕರನ್ನೂ ಒಳಗೊಂಡು, ಮಾಲೀಕರು, ಗ್ರಾಹಕರು, ಕಾನೂನಿನ ಜಾರಿ ಮಾಡುವ ಅಧಿಕಾರ ಉಳ್ಳವರು, ಸಾರ್ವಜನಿಕ ಸಂಸ್ಥೆಗಳು ಎಲ್ಲರೂ ಸೇರುತ್ತಾರೆ.**

## ೩. ಬಾಲಕಾರ್ಮಿಕರು ಮತ್ತು ಮಕ್ಕಳ ನ್ಯಾಯ ಕಾಯಿದೆ

- ಸೆಕ್ಷನ್ 2 (d)(viii): ಮಕ್ಕಳ ಎಳೆ ವಯಸ್ಸು, ಮನಸ್ಸು, ದೇಹಗಳನ್ನು ಶೋಷಿಸಿ, ದಣಿಸಿ ದುಡಿಸಿ, ಲಾಭ ಗಳಿಸುವುದರ (Unconscioble gain) ವಿರುದ್ಧ ಕ್ರಮ ಕೈಗೊಳ್ಳಲೇಬೇಕೆಂಬ ಮನೋಭಾವ. ಅಂತಹ ಶೋಷಣೆಗೆ ಒಳಗಾದ ಮಕ್ಕಳನ್ನು ಪೋಷಣೆ ಮತ್ತು ರಕ್ಷಣೆಯ ಆವಶ್ಯಕತೆ ಇರುವ ಮಗುವೆಂದು ಪರಿಗಣಿಸಬೇಕು.

- ಸೆಕ್ಷನ್ 26 : ಮಕ್ಕಳನ್ನು ದುಡಿಮೆಗೆ ಇಟ್ಟುಕೊಂಡು ಶೋಷಿಸಿದವರಿಗೆ ಶಿಕ್ಷೆ ವಿಧಿಸಬಹುದು. ಮಕ್ಕಳನ್ನು ದುಡಿಮೆಗೆ ಇಟ್ಟುಕೊಳ್ಳುವುದು, ಮಗುವನ್ನು ಜೀತದಂತಹ ಪರಿಸ್ಥಿತಿಯಲ್ಲಿಟ್ಟುಕೊಳ್ಳುವುದು, ಮಕ್ಕಳ ಸಂಪಾದನೆಯನ್ನು ಎತ್ತಿ ಹಾಕುವ ಅಪರಾಧ ಮಾಡಿದವರಿಗೆ ಮೂರು ವರ್ಷಗಳ ತನಕ ಕಾರಾಗೃಹವಾಸದ ಶಿಕ್ಷೆ ಮತ್ತು ದಂಡ ಹಾಕಬಹುದು.

## 4. ಪೋಷಣೆ ಮತ್ತು ರಕ್ಷಣೆ ಆವಶ್ಯಕತೆ ಇರುವ ಮಕ್ಕಳ ರಕ್ಷಣೆ

- ಬಾಲಕಾರ್ಮಿಕರು ಮತ್ತು (ಶಾಲೆಗೆ ಹೋಗದ) ಮುಂದೆ ಬಾಲಕಾರ್ಮಿಕರಾಗುವ ಸಾಧ್ಯತೆ ಇರುವ ಮಕ್ಕಳನ್ನು ರಕ್ಷಿಸಿ ಮಕ್ಕಳ ಕಲ್ಯಾಣ ಸಮಿತಿಗಳ ಎದುರು ಹಾಜರು ಪಡಿಸಬಹುದು – ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳು, ಚೈಲ್ಡ್ ಲೈನ್ ಮತ್ತು ಯಾವುದೇ ವ್ಯಕ್ತಿಗಳಿಂದ ಇದು ಸಾಧ್ಯ.

- ಮಕ್ಕಳನ್ನು ರಕ್ಷಿಸುವ ಸಂದರ್ಭದಲ್ಲಿ ಕಾರ್ಮಿಕ ಇಲಾಖೆ, ಪೋಲೀಸ್ ಅವರ ಸಹಾಯ ಪಡೆದು, ಮಕ್ಕಳನ್ನು ಕೆಲಸಕ್ಕಿಟ್ಟುಕೊಂಡವರ ಮೇಲೆ ದೂರು ದಾಖಲೆ ಮಾಡಬೇಕು.

- ಸಾಮಾನ್ಯವಾಗಿ ಮಕ್ಕಳನ್ನು ರಕ್ಷಿಸುವ ಪ್ರಕ್ರಿಯೆ ಸತತವಾಗಿ ನಡೆದಿಲ್ಲ. ಯಾರಾದರೂ ದೂರು ಕೊಟ್ಟರೆ ಅಥವಾ ಮಾಧ್ಯಮಗಳಲ್ಲಿ ವರದಿಯಾದರೆ ಮಾತ್ರ ಸರ್ಕಾರ ಪ್ರತಿಕ್ರಿಯಿಸುತ್ತದೆ. ಮಕ್ಕಳು ದುಡಿಯುತ್ತಿರುವ ಪ್ರಕರಣಗಳ ಬಗ್ಗೆ ಸದಾಕಾಲಕ್ಕೂ ಕಣ್ಗಾವಲು ಹಾಕುವ ವ್ಯವಸ್ಥೆ ಇಲ್ಲ.

## ೫. ದುಡಿಮೆಯಲ್ಲಿ ಬಿದ್ದಿರುವ ಮಕ್ಕಳನ್ನು ಸ್ವಯಂ ಆಗಿ (*suo motto)* ರಕ್ಷಿಸುವ ಯತ್ನ

- ದುಡಿಯುತ್ತಿರುವ ಮಕ್ಕಳನ್ನು ಸ್ವಯಂಆಗಿ/ಮುಂದಾಗಿ, ಯಾವುದೇ ದೂರು ಇರಲಿ, ಇಲ್ಲದಿರಲಿ ಈ ಮುಂದಿನವರು ರಕ್ಷಿಸಬಹುದು – ಸೆಕ್ಷನ್ 17 ಅಧಿಕಾರಿಗಳು – ಕಾರ್ಮಿಕ ಇಲಾಖೆ, ಪೋಲೀಸ್, ಶಿಕ್ಷಣ, ಸಮಾಜ ಕಲ್ಯಾಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ನ್ಯಾಯಾಂಗ, ಆರೋಗ್ಯ ಇಲಾಖೆಗಳು ಮತ್ತು ಮಕ್ಕಳ ಕಲ್ಯಾಣ ಸಮಿತಿಗಳು. (ಮಕ್ಕಳ ನ್ಯಾಯ ಕಾಯಿದೆಗೆ ೨೦೦೬ರಲ್ಲಿ ಆಗಿರುವ ತಿದ್ದುಪಡಿ ಹಾಗೂ ನಿಯಮಗಳಂತೆ ಮಕ್ಕಳ ಕಲ್ಯಾಣ ಸಮಿತಿಗಳೂ ಸಹ ಸ್ವಯಂಆಗಿ ಮಕ್ಕಳನ್ನು ರಕ್ಷಿಸಬಹುದು).

- ಎಷ್ಟೋ ಬಾರಿ ದುಡಿಯುವ ಸಂದರ್ಭಗಳಲ್ಲಿ ಮಕ್ಕಳಿಗೆ ತೀವ್ರ ಸ್ವರೂಪದ ಆಘಾತಗಳಾಗಿರುತ್ತದೆ. ಈ ಕುರಿತು ವೈದ್ಯರು (ಸರ್ಕಾರ/ಖಾಸಗಿ) ವೈದ್ಯರು ಚಿಕಿತ್ಸೆ ಕೊಟ್ಟಿರುತ್ತಾರೆ. ಆದರೆ, ಆ ಕುರಿತು ವೈದ್ಯಕೀಯ ಅಪರಾಧ ಪ್ರಕರಣ (MLC - medico legal case) ದಾಖಲಿಸಿರುವುದಿಲ್ಲ.

- ದುಡಿಯುವ ಮಕ್ಕಳನ್ನು ಪೋಲೀಸರು ಕಂಡರೂ ಯಾವುದೇ ಕ್ರಮ ಕೈಗೊಳ್ಳುವುದಿಲ್ಲ. ಬೀದೀ ಮಕ್ಕಳು/ಅನಾಥರನ್ನು ರಕ್ಷಿಸುವು ಸಾಧ್ಯತೆಗಳಿವೆ. (ಎಲ್ಲರಿಗೂ ಯಾವ ಕಾನೂನು ಬಳಸಬೇಕು, ಯಾವ ನ್ಯಾಯಾಲಯದೆದುರು ಮಕ್ಕಳನ್ನು ಕರೆದೊಯ್ಯಬೇಕು ಎಂಬ ಮಾಹಿತಿ ಇಲ್ಲ).

## 6. ದುಡಿಮೆಯಲ್ಲಿ ಬಿದ್ದಿರುವ ಮಕ್ಕಳನ್ನು ಸ್ವಯಂ ಆಗಿ (*suo motto)* ರಕ್ಷಿಸುವ ಯತ್ನ

- ದೀರ್ಘಾವಧಿಯಲ್ಲಿ ಮಕ್ಕಳು ಶಾಲೆಯಿಂದ ಅಥವಾ ವಿದ್ಯಾರ್ಥಿ ನಿಲಯಗಳಿಂದ ಹೊರಗಿದ್ದರೂ ಆ ಕುರಿತು ಗಂಭೀರವಾದ ವರದಿಯನ್ನು ಸಂಬಂಧಿಸಿದವರು ನೀಡುತ್ತಿಲ್ಲ (ಸ್ವಯಂಸೇವಾ ಸಂಘಟನೆಗಳು, ಸರ್ಕಾರ, ಧಾರ್ಮಿಕ ಅಥವಾ ಖಾಸಗೀ ಸಂಸ್ಥೆಗಳು). ಈ ಮಕ್ಕಳು ಕಳೆದು ಹೋಗಿರಬಹುದು, ಓಡಿ ಹೋಗಿರಬಹುದು, ಕಾರ್ಮಿಕರಾಗಿರಬಹುದು, ಮದುವೆಗೆ ಈಡಾಗಿರಬಹುದು, ಸಾಗಣೆಯಾಗಿರಬಹುದು ಅಥವಾ ಬೇರೆಲ್ಲೋ ಮತ್ತೆ ಶಾಲೆಗೆ ಸೇರಿರಬಹುದು.

- ಸ್ವಯಂ ಸೇವಾ ಸಂಘಟನೆಗಳು ನಡೆಸುವ ಬಾಲಕಾರ್ಮಿಕ ಶಾಲೆಗಳಿಗೆ (ಎನ್.ಸಿ.ಎಲ್.ಪಿ. / ಎಸ್.ಸಿ.ಎಲ್.ಪಿ / ಎಸ್.ಎಸ್.ಎ ಅಥವಾ ದೇಶೀ/ವಿದೇಶೀ ಸಂಸ್ಥೆಗಳ ಅನುದಾನದಿಂದ) ಸೇರುವ ಮಕ್ಕಳನ್ನು ಕುರಿತು ಸಾಮಾನ್ಯವಾಗಿ ಯಾವುದೇ ದೂರು ಇರುವುದಿಲ್ಲ, ಅವರಿಗೆ ಪರಿಹಾರ ಸಿಕ್ಕಿರುವುದಿಲ್ಲ, ಮಕ್ಕಳನ್ನು ಕುರಿತು ಮಕ್ಕಳ ಕಲ್ಯಾಣ ಸಮಿತಿಗಳಲ್ಲಿ ಮಾಹಿತಿ ಇರುವುದಿಲ್ಲ.

- ಕಾರ್ಮಿಕ ಇಲಾಖೆಯವರು ದುಡಿಯುವ ಮಕ್ಕಳನ್ನು ರಕ್ಷಿಸಿದರೂ ಅವರಲ್ಲಿ ಮಕ್ಕಳ ಪುನರ್ವಸತಿ ಕುರಿತು ಸ್ಪಷ್ಟವಾದ ಯೋಜನೆಯಿಲ್ಲ (ಮಕ್ಕಳ ಕಲ್ಯಾಣ ಸಮಿತಿಗಳ ಸಹಾಯ ಪಡೆಯುತ್ತಿಲ್ಲ. ಕಾರ್ಮಿಕ ಇಲಾಖೆ ಎಲ್ಲೋ ಕೆಲವು ಬಾರಿ ಮಾತ್ರ ಸ್ವಯಂಸೇವಾ ಸಂಘಟನೆಗಳ ಸಹಾಯ ಪಡೆಯುತ್ತದೆ.)

## 7. ವಿವಿಧ ಇಲಾಖೆಗಳು ಮತ್ತು ಸಂಸ್ಥೆಗಳೊಡನೆ ಕೈಜೋಡಿಸುವುದು

**ಬಾಲಕಾರ್ಮಿಕ ಪದ್ಧತಿ ಕೊನೆಗಾಣಿಸಲು ಅಥವಾ ಮಕ್ಕಳ ಅಭಿವೃದ್ಧಿ ಕುರಿತು ಇರುವ ಎಲ್ಲ ಕ್ರಿಯಾ ಯೋಜನೆಗಳಲ್ಲಿ ಈ ಮುಂದಿನ ಸಾಲುಗಳಿರುತ್ತವೆ . . .**

ಸಮುದಾಯಗಳ ಬಡತನ ನಿರ್ಮೂಲನೆ, ಆದಾಯ ಹೆಚ್ಚಿಸಲು ಇರುವ ವಿವಿಧ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಜಾರಿ ಮಾಡುವುದು, ಶಿಕ್ಷಣ, ಆರೋಗ್ಯ, ಮಹಿಳೆಯರು ಮತ್ತು ಮಕ್ಕಳ ಕಲ್ಯಾಣ ಕಾರ್ಯಕ್ರಮಗಳ ಮೂಲಕ ಮಕ್ಕಳು ದುಡಿಮೆಗೆ ಹೋಗುವ ಬದಲು ಶಿಕ್ಷಣದಲ್ಲಿ ತೊಡಗುವಂತೆ ಮಾಡಲು ವಿವಿಧ ಇಲಾಖೆಗಳು ಮತ್ತು ಸ್ವಯಂಸೇವಾ ಸಂಘಟನೆಗಳೊಡನೆ ಸಂಯೋಜಿತ ಪ್ರಯತ್ನಗಳನ್ನು ನಡೆಸಲಾಗುತ್ತದೆ.

## 8. ರಾಜ್ಯ / ರಾಷ್ಟ್ರೀಯ ಮಟ್ಟದಲ್ಲಿ ಸಂಯೋಜಿತ ಪ್ರಯತ್ನಗಳ ಕೆಲವು ಉದಾಹರಣೆಗಳು

- ಹೆಚ್.ಐ.ವಿ./ಏಡ್ಸ್ ವಿರುದ್ಧದ ಹೋರಾಟ
- ಪೋಲಿಯೋ ಕೊನೆಗಾಣಿಸುವುದು
- ಸಣ್ಣ ಕುಟುಂಬಗಳಿಗೆ ಪ್ರೋತ್ಸಾಹ
- ಭ್ರೂಣ ಲಿಂಗ ಪತ್ತೆ ನಿಷೇಧ

## 9. ಬಾಲಕಾರ್ಮಿಕ ಪದ್ಧತಿ ವಿರುದ್ಧ ಹೋರಾಡಲು ಸಂಯೋಜನೆ

- ತಮ್ಮ ಕೆಲಸಗಳು, ಯೋಜನೆಗಳಲ್ಲಿ ನೇರವಾದ ಸಂಸರ್ಗ ಇಲ್ಲದೆ ಸ್ವತಂತ್ರವಾಗಿ ಕೆಲಸ ಮಾಡುವ ವಿವಿಧ ಇಲಾಖೆಗಳು, ಸಮೂಹಗಳು ಬಾಲಕಾರ್ಮಿಕ ಪದ್ಧತಿಯನ್ನು ಕೊನೆಗಾಣಿಸುವ ಸಮಾನ ಗುರಿಯನ್ನಿಟ್ಟುಕೊಂಡು ಸಂಯೋಜಿತ ಯತ್ನ ಮಾಡಲೇಬೇಕಿದೆ.
- ಹೀಗೆ ಹಲವು ಇಲಾಖೆಗಳು ಮತ್ತು ಗುಂಪುಗಳು ಒಂದೇ ಭಾಷೆ ಮಾತನಾಡಿದರೆ, ಬಾಲಕಾರ್ಮಿಕ ಪದ್ಧತಿ ಎನ್ನುವ ಸಾಮಾಜಿಕ ಮತ್ತು ಆರ್ಥಿಕ ಶೋಷಣೆಯ ಸಮಸ್ಯೆ ಬಗೆ ಹರಿಸುವ ಒಂದೇ ಗುರಿಯನ್ನು ಸಾಧಿಸಲು ಒಗ್ಗೂಡಿರುವುದು ಎಂಬ ಸಂದೇಶವನ್ನು ದುಡಿಮೆಗಾಗಿ ಮಕ್ಕಳನ್ನು ಶೋಷಿಸುತಿರುವವರಿಗೆ ಸ್ಪಷ್ಟ ಮಾತುಗಳ ಸಂದೇಶವನ್ನು ನೀಡಬಹುದು.
- ಬಾಲಕಾರ್ಮಿಕ ಪದ್ಧತಿಯನ್ನು ಕೊನೆಗಾಣಿಸಲು ನಡೆದಿರುವ ಎಲ್ಲ ಪ್ರಯತ್ನಗಳಿಗೆ ಅರ್ಥ ಬರುವುದು ಮತ್ತು ಮಾಡಿದ ಕೆಲಸಗಳು ಸುಸ್ಥಿರವಾಗಲು ವಿವಿಧ ರೀತಿಯ ಸಾಮರ್ಥ್ಯ ಮತ್ತು ಜವಾಬ್ದಾರಿಗಳಿರುವ ಇಲಾಖೆಗಳು (ಒಮ್ಮೊಮ್ಮೆ ಒಂದೇ ರೀತಿಯ ಕೆಲಸಗಳನ್ನು ಮಾಡುತ್ತಿದ್ದರೂ ಸಹ) ಒಟ್ಟಿಗೆ ಸೇರಿ ಕೆಲಸ ಮಾಡಬೇಕು. ಉದಾ. ದುಡಿಯುವ ಮಕ್ಕಳನ್ನು ಬಿಡಿಸಲು ದಾಳಿ, ಬಿಡುಗಡೆ, ಕಾನೂನು ಕ್ರಮಗಳು, ಶೈಕ್ಷಣಿಕವಾಗಿ ಹಾಗೂ ಕೌಟುಂಬಿಕವಾಗಿ ಪುನರ್ವಸತಿ, ಅನುಸರಣೆ, ಇತ್ಯಾದಿ.

10. ಬಾಲಕಾರ್ಮಿಕ ಪದ್ಧತಿ ವಿಮೋಚನೆ ಯೋಜನೆಗಳ ಗುರಿಗುಂಪುಗಳು?

- ಸಾಮಾನ್ಯವಾಗಿ ಮಕ್ಕಳು ಮತ್ತು ಕುಟುಂಬಗಳು (ಫಲಾನುಭವಿಗಳು)
- ಈ ಕಾರ್ಯಕ್ರಮ ಮತ್ತು ಯೋಜನೆಗಳ ಮುಖ್ಯ *ಗುರಿ* ಆಗಬೇಕಿರುವುದು – ಮಕ್ಕಳನ್ನು ಕೆಲಸಕ್ಕಿಟ್ಟುಕೊಳ್ಳುವ ಮಾಲೀಕರು, ಮಕ್ಕಳ ಸಾಗಣೆಗಾರರು, ಮಾರಾಟಗಾರರು, ಮಕ್ಕಳಿಂದ ಸೇವೆ ಪಡೆಯುತ್ತಿರುವ ಗ್ರಾಹಕರು, ಮಕ್ಕಳು ಕಾರ್ಮಿಕರಾಗದಂತೆ ತಡೆಯಲು ಕಾನೂನುಗಳ ಜಾರಿ ಮಾಡದ ಸರ್ಕಾರೀ ಇಲಾಖೆಗಳ ಸಿಬ್ಬಂದಿ/ಅಧಿಕಾರಿಗಳೇ ಇತ್ಯಾದಿ.

- ಮಕ್ಕಳ ನ್ಯಾಯ ಕಾಯಿದೆಯಲ್ಲಿನ ಅವಕಾಶಗಳನ್ನು ಬಳಸಿಕೊಂಡು, ರಕ್ಷಿಸಲ್ಪಟ್ಟ ಬಾಲಕಾರ್ಮಿಕರನ್ನು, ಪೋಷಣೆ ಮತ್ತು ರಕ್ಷಣೆಯ ಆವಶ್ಯಕತೆ ಇರುವ ಮಕ್ಕಳೆಂದು ಪರಿಗಣಿಸುವುದು.
- ಪ್ರಸಂಗ ಬಂದಲ್ಲಿ, ಬಾಲಕಾರ್ಮಿಕರನ್ನು ರಕ್ಷಿಸಲು ಕಾರ್ಮಿಕ ಇಲಾಖೆ, ಪೋಲೀಸ್, ಚೈಲ್ಡ್‌ಲೈನ್ ಹಾಗೂ ಸಂಬಂಧಿತ ಸ್ವಯಂಸೇವಾ ಸಂಸ್ಥೆಗಳಿಗೆ ನಿರ್ದೇಶನ ನೀಡುವುದು.
- ಮಕ್ಕಳನ್ನು ಜೀತದಾಳುವಿನಂತೆ ನೋಡಿಕೊಂಡಿದ್ದಲ್ಲಿ, ಜೀತ ವಿಮುಕ್ತಿ ಕಾಯಿದೆಯನ್ನು ಬಳಸಲು ಜಿಲ್ಲಾಧಿಕಾರಿಗಳಿಗೆ ಮಾಹಿತಿ ರವಾನೆ
- ಮಕ್ಕಳ ಮೇಲಾಗಿರುವ ದೌರ್ಜನ್ಯ ಕುರಿತು ಪೋಲೀಸ್ ದೂರು ದಾಖಲೆ
- ಸ್ವಯಂಸೇವಾ ಸಂಘಟನೆ, ಸರ್ಕಾರದ ನಿವಾಸಗಳಲ್ಲಿ ತಾತ್ಕಾಲಿಕ ವಸತಿ
- ಸರ್ಕಾರಿ ವೈದ್ಯರಿಂದ ವಯಸ್ಸಿನ ದೃಢೀಕರಣ
- ಮಕ್ಕಳ ಹೇಳಿಕೆ, ಮಕ್ಕಳ ಕುಟುಂಬದ ಅಧ್ಯಯನ ನಡೆಸಲು ಸೂಚನೆ
- ಬಾಲಕಾರ್ಮಿಕರನ್ನು ನೇಮಿಸಿಕೊಂಡವರ ಬಗ್ಗೆ ಬಗ್ಗೆ ಮಾಧ್ಯಮಗಳಲ್ಲಿ ಮಾಹಿತಿ ಮತ್ತು ಪ್ರಚಾರ.

- ದುಡಿಮೆಯಲ್ಲಿದ್ದು ರಕ್ಷಿಸಲ್ಪಟ್ಟ ಮಕ್ಕಳು ಶಾಲಾ ಶಿಕ್ಷಣ ವ್ಯವಸ್ಥೆಯಿಂದ ಹೊರ ಬಂದವರಾಗಿದ್ದಲ್ಲಿ (drop out/pushed out) ಶಿಕ್ಷಣ ಇಲಾಖೆಯು ಅಂತಹ ಮಕ್ಕಳು ಶಾಲೆ ತೊರೆದ/ವಿದ್ಯಾರ್ಥಿ ನಿಲಯ ತೊರೆದ ದಿನಾಂಕ (last attendance certificate) ಹಾಗೂ ಜನ್ಮ ದಿನಾಂಕ ವಿವರವನ್ನು ನೀಡಬೇಕು.
- ಯಾವುದೇ ಸಂಸ್ಥೆಯು ಬಾಲಕಾರ್ಮಿಕರು / ರಸ್ತೆಯ ಮೇಲೆ ಅಲೆಯುತ್ತಿದ್ದ ಮಕ್ಕಳನ್ನು ರಕ್ಷಿಸಿ, ಅವರನ್ನು ತಮ್ಮ ಸಂಸ್ಥೆಯ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಾಗ, ಆ ಮಕ್ಕಳ ಪೋಷಕರನ್ನು ಸಂಘಟನೆಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮೂಲಕ ಸಂಪರ್ಕಿಸಲೇ ಬೇಕು. ಆವಶ್ಯಕತೆ ಬಿದ್ದಲ್ಲಿ ಪೋಲೀಸ್ ದೂರು ಸಹ ನೀಡಬೇಕು.
- ಶಿಕ್ಷಣದ ಅವಕಾಶ, ಆಪ್ತ ಸಲಹೆ ಮತ್ತು ಕಾನೂನು ನೆರವು ಒದಗಿಸಬೇಕು.
- ಕಾನೂನು ನೆರವನ್ನು ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ನೆರವನ್ನು ಕೋರಬಹುದು.
- ರಕ್ಷಿಸಲ್ಪಟ್ಟ ಮಕ್ಕಳು ಗ್ರಾಮಗಳಿಗೆ ಹಿಂದುರಿಗಿದಾಗ, ಗ್ರಾಮ ಪಂಚಾಯಿತಿಗಳು ಇದನ್ನು ಗಮನಕ್ಕೆ ತೆಗೆದುಕೊಂಡು ಮಕ್ಕಳ ಕಲ್ಯಾಣ ಸಮಿತಿಗೆ ಮಾಹಿತಿ ನೀಡಿ, ಮಕ್ಕಳ ಪುನರ್ವಸತಿಗೆ ನೆರವಾಗಬೇಕು – ಬಡತನ ನಿರ್ಮೂಲನೆ ಕಾರ್ಯಕ್ರಮದ ನೆರವು, ಮಕ್ಕಳ ಶಿಕ್ಷಣಕ್ಕೆ ಪ್ರಾಯೋಜನೆ ಇತ್ಯಾದಿ.

**ಬಾಲಕಾರ್ಮಿಕ ಪದ್ಧತಿ ಕೊನೆಗಾಣಿಸಲು ವಿವಿಧ ಇಲಾಖೆಗಳು ತೆಗೆದುಕೊಳ್ಳಬಹುದಾದ ಜವಾಬ್ದಾರಿಗಳು**
**ದುಡಿಯುವ ಮಕ್ಕಳ ಬಿಡುಗಡೆ ಮತ್ತು ಪುನರ್ವಸತಿಯಲ್ಲಿ ಮಕ್ಕಳ ಕಲ್ಯಾಣ ಸಮಿತಿಗಳ ಪಾತ್ರ**

1. ಬಾಲಕಾರ್ಮಿಕರು ಎದುರಿಸುವ ಸಮಸ್ಯೆಗಳು

- ರಕ್ಷಿಸಲ್ಪಟ್ಟ ಎಲ್ಲ ಮಕ್ಕಳನ್ನು ಮಕ್ಕಳ ನ್ಯಾಯ ವ್ಯವಸ್ಥೆಯ (ಮಕ್ಕಳ ಕಲ್ಯಾಣ ಸಮಿತಿ) ಎದುರು ಹಾಜರುಪಡಿಸುತ್ತಿಲ್ಲ. (ಕಾರ್ಮಿಕ ಇಲಾಖೆ ಮತ್ತು ಸ್ವಯಂಸೇವಾ ಸಂಘಟನೆಗಳಿಗೆ ಮಾಹಿತಿ ಇಲ್ಲ ಅಥವಾ ಮಕ್ಕಳ ಕಲ್ಯಾಣ ಸಮಿತಿಯ ಬಗ್ಗೆ ನಂಬಿಕೆ ಇಲ್ಲ)
- ದುಡಿಯುತ್ತಿದ್ದ ಮಕ್ಕಳನ್ನು ರಕ್ಷಿಸಿದಾಗ ಎಲ್ಲ ಪ್ರಕರಣಗಳಲ್ಲೂ ಮಾಲೀಕರ ಮೇಲೆ ಸೂಕ್ತವಾದ ಕಾಯಿದೆಯಡಿ (ಮಕ್ಕಳ ನ್ಯಾಯ, ಬಾಲಕಾರ್ಮಿಕ ಪದ್ಧತಿ ನಿಷೇಧ ಮತ್ತು ನಿಯಂತ್ರಣ ಕಾಯಿದೆ, ಅಂಗಡಿ ಮುಂಗಟ್ಟುಗಳ ಕಾಯಿದೆ, ಇನ್ನಿತರ) ದೂರು ದಾಖಲಾಗುತ್ತಿಲ್ಲ
- ಸಂವಿಧಾನದ ಪರಿಚ್ಛೇದ 21 ಎ (ಶಿಕ್ಷಣದ ಹಕ್ಕು) ಎದುರಿಟ್ಟುಕೊಂಡು ಯಾವುದೇ ಪ್ರಕರಣ ದಾಖಲಾಗಿರುವುದು ನಮಗೆ ಗೊತ್ತಿಲ್ಲ. ಕೆಲವು ಪ್ರಕರಣಗಳಲ್ಲಿ ಬೆಂಗಳೂರು ಮಕ್ಕಳ ಕಲ್ಯಾಣ ಸಮಿತಿ ಪ್ರಯತ್ನಿಸಿದೆ. ಆದರೆ ಫಲ ಸಿಕ್ಕಿಲ್ಲ.
- ಮಕ್ಕಳನ್ನು ರಕ್ಷಿಸಿ ಸುಪರ್ದಿಯಲ್ಲಿಟ್ಟುಕೊಳ್ಳುವ ಸರ್ಕಾರಿ ಅಥವಾ ಸ್ವಯಂಸೇವ ಸಂಘಟನೆಗಳ ಸಿಬ್ಬಂದಿಗೆ ಕಾನೂನು ವಿಚಾರಗಳ ಸ್ಪಷ್ಟ ಅರಿವಿಲ್ಲ.
- ಮಕ್ಕಳನ್ನು ಅವರ ಪೋಷಕರೊಂದಿಗೆ ಸೇರಿಸುವ ಪ್ರಕ್ರಿಯೆ ನಿಧಾನವಾಗುತ್ತಿದೆ – ವಿಳಾಸ ಇಲ್ಲ, ಮಾಲೀಕರಿಂದ ಮತ್ತು ಕೆಲವೊಮ್ಮೆ ಕುಟುಂಬದವರಿಂದ ಅಸಹಕಾರ, ಪೊಲೀಸರು ಅಥವಾ ಇನ್ನಿತರರಿಂದ ಬೆಂಗಾವಲು ಸಿಗುವುದಿಲ್ಲ, ಇತ್ಯಾದಿ
- ಪ್ರಕರಣ ನ್ಯಾಯಾಲಯ / ಕಾಮಿಕ ಇಲಾಖೆಯಲ್ಲಿದ್ದಲ್ಲಿ ಪ್ರಕರಣಗಳ ಇತ್ಯರ್ಥ ತೀರಾ ತಡವಾಗುತ್ತದೆ.
- ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ಮಾಲೀಕರಿಂದ ಪಡೆಯುವ ರೂ.20,000/–ದ ಫಲ ಮಕ್ಕಳಿಗೆ ನೇರವಾಗಿ ಸಿಗುತ್ತಿಲ್ಲ.
- ರಕ್ಷಿಸಲ್ಪಟ್ಟ ಹೊರ ರಾಜ್ಯಗಳ ಮಕ್ಕಳು ತ್ರಿಶಂಕು ಸ್ಥಿತಿಯಲ್ಲಿ

2. Basic/Root causes of the problem

- ಪಂಚಾಯಿತಿ / ವಾರ್ಡ್ ಮಟ್ಟದಲ್ಲಿ ಬಾಲಕಾರ್ಮಿಕರ ಸಂಖ್ಯೆ ಇರಲಿ ತಮ್ಮ ವ್ಯಾಪ್ತಿಯಲ್ಲಿರುವ ಮಕ್ಕಳ ಸಂಖ್ಯೆ ಇರುವುದಿಲ್ಲ. (2006ರಿಂದ ಮಕ್ಕಳ ಗ್ರಾಮಸಭೆ ಮಾಡಬೇಕಿರುವುದರಿಂದ ಕೆಲವರು ಈ ಸಂಖ್ಯೆ ಇಟ್ಟುಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ)
- ಕಳೆದು ಹೋಗುವ / ಓಡಿ ಹೋಗುವ ಮಕ್ಕಳ ಬಗ್ಗೆ ರಾಷ್ಟ್ರೀಯ ಮಟ್ಟದಲ್ಲಿ ಮಾಹಿತಿ ವಿನಿಮಯ ಇಲ್ಲ (ಇಂತಹ ಮಕ್ಕಳು ದುಡಿಮೆಗೆ ಬಿದ್ದಿರಬಹುದು ಅಥವಾ ಮಾರಾಟ ಸಾಗಣೆಗೆ ಗುರಿಯಾಗಿರಬಹುದು)
- ಸಂವಿಧಾನದ ಪರಿಚ್ಛೇದ 21 ಎ – ಶಿಕ್ಷಣದ ಹಕ್ಕಿನ ಉಲ್ಲಂಘನೆ ಶಿಕ್ಷಾರ್ಹ ಎಂಬುದು ಸಾರ್ವತ್ರಿಕವಾಗಿಲ್ಲ
- ಈಗಲೂ ದುಡಿಯಲು ಹಾಗೂ ವ್ಯಾಪಾರೀ ಲೈಂಗಿಕ ಶೋಷಣೆಗಾಗಿ ಮಕ್ಕಳಿಗೆ ಬೇಡಿಕೆಯಿದೆ.
- ಗ್ರಾಮೀಣ ಪ್ರದೇಶಗಳಿಂದ ನಗರಗಳಿಗೆ ಉದ್ಯೋಗ ಅರಸಿ ಆಗುತ್ತಿರುವ ಅತೀವವಾದ ವಲಸೆ
- ವಲಸೆ ಬಂದವರಿಗೆ ಮೂಲಭೂತ ಸೌಕರ್ಯಗಳಿಲ್ಲ
- ಮಕ್ಕಳನ್ನು ಕುರಿತು ಪೋಷಕರ ಅಸಡ್ಡೆ, ಆಟೋಟಗಳಿಗೆ, ಮನೋರಂಜನೆಗೆ, ಶಿಕ್ಷಣಕ್ಕೆ ಸೌಲಭ್ಯವಿಲ್ಲ
- ಮಕ್ಕಳನ್ನು ಇಟ್ಟುಕೊಳ್ಳುವ ಸಂಸ್ಥೆಗಳೆಲ್ಲವೂ ಅರ್ಹ ಸಂಸ್ಥೆಗಳೆಂಬ ಮಾನ್ಯತೆ ಪಡೆಯದಿರುವುದು.
- ಬಾಲಕಾರ್ಮಿಕರನ್ನು ಬಿಡಿಸುವ ಕೆಲಸದಲ್ಲಿರುವ ಸಂಸ್ಥೆಗಳ ವೈರುಧ್ಯತೆಗಳು ಮತ್ತು ಮಕ್ಕಳ ಕಲ್ಯಾಣ ಸಮಿತಿಗೆ ಬಾರದಿರುವುದು
- ಸಮಿತಿಗಳ ಅನೇಕ ಸದಸ್ಯರಿಗೆ ಸಾಧ್ಯತೆಗಳ ಕಲ್ಪನೆಯಿಲ್ಲದಿರುವುದು ಮತ್ತು ಕೇವಲ ಕಾಯಿದೆಗೆ ಅಂಟಿಕೊಳ್ಳುವ ಸ್ವಭಾವ.
- ಮಕ್ಕಳ ಕಲ್ಯಾಣ ಸಮಿತಿಗಳ ಸಾಧ್ಯತೆಗಳನ್ನು ಇತರ ಇಲಾಖೆಗಳು (ಕಾರ್ಮಿಕ, ಶಿಕ್ಷಣ, ನ್ಯಾಯ, ಪೊಲೀಸ್, ಸಮಾಜ ಕಲ್ಯಾಣ, ಆರೋಗ್ಯ, ಗ್ರಾಮೀಣಾಭಿವೃದ್ಧಿ, ಇತ್ಯಾದಿ) ಇನ್ನೂ ಗುರುತಿಸದಿರುವುದು
- ಸಹಾಯದ ಆವಶ್ಯಕತೆಯಿರುವ ಮಕ್ಕಳ ಸಂಖ್ಯೆಯ ಬಗ್ಗೆ ಶಿಕ್ಷಣ, ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆಯಲ್ಲಿ ಸಮಾನ ಅರ್ಥೈಸುವಿಕೆ ಇಲ್ಲದಿರುವುದು
- ಕಳೆದು ಹೋದ, ಓಡಿ ಹೋದ, ಹಿಂಸೆ, ದೌರ್ಜನ್ಯಕ್ಕೊಳಗಾದ ಮಕ್ಕಳ ರಕ್ಷಣೆ ಕುರಿತು ಪೊಲೀಸರು ದೂರು ದಾಖಲಿಸದಿರುವುದು
- ಮಕ್ಕಳನ್ನು ಇಟ್ಟುಕೊಳ್ಳುವ ಸಂಸ್ಥೆಗಳೆಲ್ಲವೂ ಅರ್ಹ ಸಂಸ್ಥೆಗಳೆಂಬ ಮಾನ್ಯತೆ ಪಡೆಯದಿರುವುದು.

೩. ಸಮಸ್ಯೆಗಳಿಗೆ ಪರಿಹಾರ – ಕೆಲವು ಪ್ರಯತ್ನಗಳು – ಸರ್ಕಾರ ಮತ್ತು ಸಮಾಜ

- **ಮಕ್ಕಳ ಕಲ್ಯಾಣ ಸಮಿತಿಗಳು ಎಲ್ಲ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಆದರೂ ಮಕ್ಕಳ ಕಲ್ಯಾಣ ಸಮಿತಿಗಳ ಬಗ್ಗೆ ಇರುವ ಅರಿವು ಮತ್ತು ಪ್ರಚಾರ ಸಾಲದು.**
- **ವಿವಿದ ಇಲಾಖೆಗಳ ಸಹಾಯ ಪಡೆದು ದುಡಿಯುವ ಮಕ್ಕಳನ್ನು ರಕ್ಷಿಸುವುದು, ನ್ಯಾಯ ಒದಗಿಸುವುದು, ಪುನರ್ವಸತಿ ಕಲ್ಪಿಸ ಬಹುದು ಎಂದು ಮಕ್ಕಳ ಕಲ್ಯಾಣ ಸಮಿತಿಗಳು ತಿಳಿದಿವೆ.**
- **ವಿವಿಧ ಇಲಾಖೆಗಳು ಮಕ್ಕಳ ಕಲ್ಯಾಣ ಸಮಿತಿಗಳು ಮಕ್ಕಳಿಗೆ ನ್ಯಾಯ ನೀಡುವ ಶಾಸನಾತ್ಮಕ ಕೇಂದ್ರ ಎಂಬುದು ತಿಳಿಯಬೇಕು.**
- **ರಾಜ್ಯದ ಎಲ್ಲ ಪೋಲೀಸರು ಮತ್ತು ಮಕ್ಕಳ ವಿಶೇಷ ಪೋಲೀಸ್ ಘಟಕಗಳು ಮಕ್ಕಳ ನ್ಯಾಯಕ್ಕೆ  ಗೌರವ ಕೊಡಬೇಕು.**
- **ಸ್ವಯಂಸೇವಾ ಸಂಘಟನೆಗಳು ಮತ್ತು ಚೈಲ್ಡ್‌ಲೈನ್ ಸಹಾಯ ಪಡೆಯಲು ಮಕ್ಕಳ ಕಲ್ಯಾಣ ಸಮಿತಿಗಳು ಹಿಂಜರಿಯಬಾರದು.**

## 4. ಸಲಹೆ, ಪರಿಹಾರ ಮತ್ತು ಪ್ರಕ್ರಿಯೆಗಳು

- **ಮಕ್ಕಳ ಕಲ್ಯಾಣ ಸಮಿತಿಗಳಿಂದ ದೊರೆಯುವ ಸೇವೆಗಳನ್ನು ಕುರಿತು ವ್ಯಾಪಕವಾದ ಮಾಹಿತಿ ಎಲ್ಲರಿಗೂ ತಲುಪಲು ತರಬೇತಿಗಳು ನಡೆಯಬೇಕು.**
- **ಎಲ್ಲ ಜಿಲ್ಲೆಗಳ ಮ.ಕ.ಸ.ಗಳಿಗೆ ಒಂದೇ ರೀತಿಯ ತರಬೇತಿ, ಸೌಲಭ್ಯಗಳು ದೊರೆಯಬೇಕು.**
- **ಮಕ್ಕಳನ್ನು ಕುರಿತು ಎಲ್ಲ ಪಂಚಾಯಿತಿಗಳಿಂದ ಮಾಹಿತಿಗಳು ಲಭ್ಯವಿರಬೇಕು.**
- **ಕಳೆದು ಹೋಗುವ ಮತ್ತು ಓಡಿ ಹೋಗುವ, ಕದ್ದು ಹೋಗುವ, ಬಲವಂತ ವಲಸೆಗಿಡಾಗುವ ಮಕ್ಕಳನ್ನು ಕುರಿತು ರಾಜ್ಯ/ರಾಷ್ಟ್ರ ಮಟ್ಟದಲ್ಲಿ ಮಾಹಿತಿ ಲಭ್ಯವಿರಬೇಕು.**
- **ಅರ್ಹ ವ್ಯಕ್ತಿ ಸಂಸ್ಥೆಗಳು ಮತ್ತು ಸರ್ಕಾರೀ ಸಂಸ್ಥೆಗಳ ಸಂಖ್ಯೆ ಹೆಚ್ಚಬೇಕು.**
- **ಬಾಲಕಾರ್ಮಿಕರ ರಕ್ಷಣೆ, ಕಾನೂನು ನಿರ್ಧಾರಗಳು, ಪುನರ್ವಸತಿ ಅನುಭವಗಳು ಹಾಗೂ ಪ್ರಯೋಗಗಳ ದಾಖಲಾತಿ ಆಗಿ ಪ್ರಚಾರವಾಗಬೇಕು.**
- **ಮಕ್ಕಳಿಗೆ ಸರಿಯಾದ ರೀತಿಯಲ್ಲಿ ನ್ಯಾಯ ಒದಗಿಸಬೇಕೆಂದರೆ ಶಿಕ್ಷಣದ ಹಕ್ಕು, ಬಾಲಕಾರ್ಮಿಕ ಪದ್ಧತಿ ನಿಷೇಧವನ್ನು ಜಂಟಿಯಾಗಿ ಗಮನಿಸಬೇಕು.**

## 5. ಮಕ್ಕಳ ಕಲ್ಯಾಣ ಸಮಿತಿಗಳು ಮತ್ತು ಬಾಲಕಾರ್ಮಿಕ ಪದ್ಧತಿ ನಿಷೇಧ

- ಶಾಲಾ ಶಿಕ್ಷಣದಿಂದ ಹೊರಗಿರುವ ಪ್ರತಿಯೊಂದು ಮಗುವನ್ನೂ ಬಾಲಕಾರ್ಮಿಕರೆಂದು ಪರಿಗಣಿಸಬೇಕು.
- ಇದರ ಜವಾಬ್ದಾರಿ – ಪಂಚಾಯಿತಿ, ಶಿಕ್ಷಣ, ಕಾರ್ಮಿಕ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ಸಮಾಜ ಕಲ್ಯಾಣ ಇಲಾಖೆಗಳ ಮೇಲೆ ಹೊರಿಸಲೇಬೇಕು.
- ಕುಟುಂಬಗಳ ಪರಿಸ್ಥಿತಿ/ಹಿನ್ನೆಲೆಗೂ ಬಾಲಕಾರ್ಮಿಕ ಪದ್ಧತಿಗೂ ಸಂಬಂಧವಿರುವುದನ್ನು ಒಪ್ಪಲೇಬೇಕು.
- ಕಷ್ಟಕರ ಕೌಟುಂಬಿಕ  ಹಿನ್ನೆಲೆಯಿರುವ, ಶಾಲೆಗೆ ಬಾರದಿರುವ, ದುಡಿಯುವ ಮಕ್ಕಳನ್ನು ಕುರಿತು ತಮ್ಮ ವರ್ತನೆ ಹೇಗಿರಬೇಕೆಂದು ಶಿಕ್ಷಣ, ಕಾರ್ಮಿಕ ಇಲಾಖೆಗಳ ಅಧಿಕಾರಿಗಳು, ಶಿಕ್ಷಕರನ್ನು ಕರೆಸಿ ಅಂತಹ ಮಕ್ಕಳ ಪುನರ್ವಸತಿಗೆ ತಡವಿಲ್ಲದೆ ನಿರ್ಧಾರಗಳನ್ನು ತೆಗೆದುಕೊಳ್ಳುವ ವಿಧಾನದ ಪರಿಚಯ ಮಾಡಿಕೊಡಬೇಕು.
- ಎಲ್ಲೆಡೆಯೂ ಕನಿಷ್ಟ ಕೂಲಿ ಮತ್ತು ಪರಿಹಾರಗಳನ್ನು ನೀಡುವ ಪದ್ಧತಿ ಕಡ್ಡಾಯವಾಗಿ ಜಾರಿಯಾಗಬೇಕು.
- ಮಕ್ಕಳಿಗೆ ಕಾನೂನು ನೆರವು ದೊರಕಿಸಲು ಎಲ್ಲ ಪ್ರಕರಣಗಳನ್ನು ರಾಜ್ಯ ಕಾನೂನು ಸೇವಾ ಪ್ರಾಧಿಕಾರಕ್ಕೆ ಮೊರೆ ಹೋಗಬೇಕು ಮತ್ತು ಮಾನವ ಹಕ್ಕುಗಳ ಆಯೋಗಕ್ಕೆ ವರದಿ ಮಾಡಬೇಕು.
- ಮಕ್ಕಳ ಪರವಾಗಿ ದನಿ ಎತ್ತುವವರ ಯಾದಿ ತಯಾರಾಗಬೇಕು. ಮಕ್ಕಳನ್ನು ದುಡಿಯಲು ಇಟ್ಟುಕೊಂಡವರ ವಿವರಗಳನ್ನು ಸಾರ್ವಜನಿಕವಾಗಿ ತೆರೆದಿಡಬೇಕು. ಅದೇ ರೀತಿ ಮಕ್ಕಳ ಪುನರ್ವಸತಿ ಕುರಿತು ಪ್ರಚಾರ ಮಾಡಬೇಕು.

# – ಬಾಲಕಾರ್ಮಿಕ ಪದ್ಧತಿ ವಿರುದ್ಧ ಸಾರ್ವಜನಿಕವಾಗಿ – ಮಾತನಾಡುವುದು ಎಲ್ಲರ ಜವಾಬ್ದಾರಿಯಾಗಬೇಕು.